(v) in the entries relating to Serial Number 5, in column (3), for the figure "12%", the figure "13.8%" shall be substituted.

(vi) in the entries relating to Serial Number 6, in column (3), for the figure "12%", the figure "13.8%" shall be substituted.

(vii) in the entries relating to Serial Number 7, in column (3), for the figure "12%", the figure "13.8%" shall be substituted.

(viii) in the entries relating to Serial Number 9, in column (3), for the figure "9%", the figure "10.35%" shall be substituted.

(ix) in the entries relating to Serial Number 10, in column (3), for the figure "12%", the figure "13.8%" shall be substituted.

(x) in the entries relating to Serial Number 11, in column (3), for the figure "12%", the figure "13.8%" shall be substituted.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೇ, (ii) 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262 (3)ನೇ ಮತ್ತು 300 (5)ನೇ ಪ್ರಕರಣದ ಮೇರೆಗೆ ತುಮಕೂರು ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿ ಹಾಗೂ ಬಿಜಾಪುರ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ರೇಷ್ಮೆ ಮತ್ತು ಜವಳಿ, ನಾಗರೀಕ, ವಿಮಾನಯಾನ ಮತ್ತು ಮೂಲ ಸೌಕರ್ಯ ಸಚಿವರ (iii) **ಪರವಾಗಿ):** ಮಾನ್ಯ ಅಧ್ಯಕ್ಷರೇ, 1956ರ ಕಂಪನಿ ಕಾಯ್ದೆಯ ಅಧಿನಿಯಮ 619 (ಎ) ಪ್ರಕರಣದ ಮೇರೆಗೆ ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ ಹಾಗೂ ಕರ್ನಾಟಕ ರಾಜ್ಯ ಕೈ ಮಗ್ಗ ಅಭಿವೃದ್ಧಿ ನಿಗಮದ 2002–03ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

2. ವರದಿಗಳನ್ನೊಪ್ಪಿಸುವುದು

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೇ, (ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷರ ಪರವಾಗಿ) 2003–04ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ಒಂಭತ್ತನೇ ವರದಿಯನ್ನೊಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಅಂದಾಜುಗಳ ಸಮಿತಿಯ ಅಧ್ಯಕ್ಷರ ಪರವಾಗಿ ಅಂದಾಜುಗಳ ಸಮಿತಿಯ ಆರನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.